ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5, Special Issue 2, March-April, 2024, Pp. 22-25.
©*IIMRD*, Mysuru
IIMRD JOURNALS
www.iimrd.com

# ಮಾಗಡಿ ಕೋಟೆ: ಒಂದು ಚಾರಿತ್ರಿಕ ಅಧ್ಯಯನ

**ಸೋಮನಗೌಡ[1] ಮತ್ತು ಡಾ. ಎಸ್. ನಾಗರತ್ನಮ್ಮ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಸಾರಾಂಶ: (Abstract)**

*ಮಾಗಡಿ ತಾಲೂಕು ರಾಮನಗರ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಒಂದು. ಇದು ಕರ್ನಾಟಕದ ರೇಷ್ಮೆ ಜಿಲ್ಲೆ ಎಂಬ ಖ್ಯಾತಿ ಪಡೆದಿದೆ. ಯಲಹಂಕ ನಾಡಪ್ರಭುಗಳು ಬೆಂಗಳೂರು, ಮಾಗಡಿ, ಯಲಹಂಕ, ಮತ್ತು ಕುಣಿಗಲ್ ಇವುಗಳನ್ನು ಕಾಲಕಾಲಕ್ಕೆ ತಮ್ಮ ರಾಜಧಾನಿಯಾಗಿ ಮಾಡಿಕೊಂಡಿದ್ದರು. ಮಾಗಡಿ 1638 ರಿಂದ 1720 ವರೆಗೂ ಯಲಹಂಕ ನಾಡಪ್ರಭುಗಳ ರಾಜಧಾನಿಯಾಗಿತ್ತು. ಈ ನಗರವು ಇತರೆ ರಾಜಧಾನಿಗಳಂತೆ ವ್ಯವಸ್ಥಿತ ನಗರವಾಗಿ ನಾಡಿನ ಗಮನ ಸೆಳೆದಿತ್ತು ಹಾಗೆಯೇ ಅನೇಕ ಸ್ಮಾರಕಗಳು, ದೇವಾಲಯಗಳು, ಕೋಟೆ–ಕೋತ್ತಲಗಳು, ಶಾಸನಗಳು, ಮುಂತಾದ ಐತಿಹಾಸ ಕಟ್ಟಡಗಳನ್ನು ಒಳಗೊಂಡಿದೆ. ಪ್ರಸ್ತುತ ಲೇಖನದಲ್ಲಿ ಮಾಗಡಿ ಕೋಟೆಯ ರಚನೆ, ವಾಸ್ತುಶಿಲ್ಪ, ಇತಿಹಾಸ, ಪ್ರಸ್ತುತ ಕೋಟೆಯ ಸ್ಥಿತಿಗತಿಗಳು ಹಾಗೂ ಪುನರ್ ರಚನೆ ಕುರಿತು ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ದ್ವೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ ಹಾಗೆಯೇ ಕ್ಷೇತ್ರಕಾರ್ಯ, ದಿನಪತ್ರಿಕೆಗಳು, ದೃಶ್ಯ ಮಾಧ್ಯಮಗಳಲ್ಲಿನ ವಿಷಯಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** ಮಾಗಡಿ ಕೋಟೆ, ಯಲಹಂಕ ನಾಡಪ್ರಭು, ಕಲೆ ಮತ್ತು ವಾಸ್ತುಶಿಲ್ಪ.

## ಪೀಠಿಕೆ

ಮಾಗಡಿಯು ಚಾರಿತ್ರಿಗೆ ಹಿನ್ನೆಲೆಯನ್ನು ಸುಮಾರು 12ನೇ ಶತಮಾನದಿಂದ ಗುರುತಿಸಬಹುದು. ಚೋಳ ಅರಸನೊಬ್ಬ ಕ್ರಿ.ಶ.1139 ಮಾಗಡಿಯನ್ನು ಸ್ಥಾಪಿಸಿದನು ಮುಂದೆ ಇದು ಹೊಯ್ಸಳರ ಆಡಳಿತಕ್ಕೆ ಒಳಪಟ್ಟು ನಂತರ ವಿಜಯನಗರ ರಾಜವಂಶಗಳ ಆಳ್ವಿಕೆ ಒಳಪಟ್ಟಿತೆಂದು ಗುರುತಿಸಲಾಗಿದೆ. ಅಚ್ಯುತರಾಯನು (1530–1542) ಮಾಗಡಿಗೆ ಒಬ್ಬ ಸಾಮಂತನರನ್ನು ಈ ಭಾಗದ ಪ್ರಾಂತ್ಯಾಧಿಕಾರಿಯಾಗಿ ನೇಮಿಸಿ ಅವನಿಗೆ ಆ ಪ್ರದೇಶವನ್ನು ಜಹಗೀರಾಗಿ ನೀಡಿದ್ದರು. ಕ್ರಿ.ಶ.1623ರ ಸಂದರ್ಭದಲ್ಲಿ ಮಾಗಡಿಯಲ್ಲಿದ್ದ ವಿಜಯನಗರದ ಸಾಮ್ರಾಜ್ಯದ ಸಾಮಂತ ಅಥವಾ ಪ್ರತಿನಿಧಿಯನ್ನು ಸದೆಬಡಿದು ಗಂಗಪ್ಪ ನಾಯಕ ಎಂಬ ಪಾಳೇಗಾರನು ಮಾಗಡಿಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದನು. ಈ ಸಂಧಿಗ್ದ ಪರಿಸ್ಥಿತಿಯಲ್ಲಿ ವಿಜಯನಗರದ ಅರಸ ಇಮ್ಮಡಿ ಕೆಂಪೇಗೌಡನಿಗೆ ಈ ದಂಗೆಯನ್ನು ಅಡಗಿಸಲು

*Please cite this article as: ಸೋಮನಗೌಡ ಮತ್ತು ಎಸ್. ನಾಗರತ್ನಮ್ಮ* (2024). ಮಾಗಡಿ ಕೋಟೆ : ಒಂದು ಚಾರಿತ್ರಿಕ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, ಸಂಪುಟ–5, ವಿಶೇಷ ಸಂಚಿಕೆ–2. ಪು.ಸಂ. 22–25.*

ಸೂಚಿಸಿದನು. ಕೆಂಪೇಗೌಡನು ಈ ಪಾಳೇಗಾರರನ್ನು ಕೊಂದು ಮಾಗಡಿ ಮತ್ತು ಅದರ ಸಮೀಪವಿರುವ ಸಾವನದುರ್ಗ ಪ್ರದೇಶವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಮಾಗಡಿಯನ್ನು ವಶಪಡಿಸಿಕೊಂಡ ತರವಾಯ ಇಲ್ಲಿ ಬಲವಾದ ಕೋಟೆ ಕಟ್ಟಿಸಿ ಸುತ್ತಲು ಕಂದಕ ತೋಡಿಸಿದನು. ಕ್ರಿ.ಶ 1638 ರಲ್ಲಿ ಬಿಜಾಪುರ ಆದಿಲ್‌ಶಾಹಿಗಳ ಸೇನಾಧಿಕಾರಿಯಾದ ರಣದುಲ್ಲಾ ಖಾನ್ ಬೆಂಗಳೂರನ್ನು ಆಕ್ರಮಿಸಿದಾಗ ಆ ಸಂದರ್ಭದಲ್ಲಿ ರಕ್ಷಣೆ ದೃಷ್ಟಿಯಿಂದ ಕೆಂಪೇಗೌಡ ಬೆಂಗಳೂರಿನಿಂದ ಮಾಗಡಿಗೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿದನು. ಅಂದಿನಿಂದ ಕೆಂಪೇಗೌಡ ಮನೆತನದ ಹೆಸರಿನ ಮುಂದೆ ಮಾಗಡಿ ಎಂದು ಸೇರಿಕೊಂಡಿತು ಅಂತ ಹೇಳಲಾಗುತ್ತದೆ[1].

ಮಾಗಡಿಯಲ್ಲಿ ತಿರುಮಲೆ, ರಾಮೇಶ್ವರ ದೇವಾಲಯ, ಸೋಮನಾಥ ದೇವಾಲಯಗಳು, ಸಂಕೀರ್ಣಗಳನ್ನು ನಿರ್ಮಿಸಲಾಯಿತು. ಕೊನೆಗೆ ಮೈಸೂರಿನ ದಳವಾಯಿ ದೇವರಾಜ್ ಕ್ರಿ.ಶ. 1728ರಲ್ಲಿ ಯಲಹಂಕ ನಾಡಪ್ರಭುಗಳ ಕೊನೆಯ ಅರಸ ಮುಮ್ಮಡಿ ಕೆಂಪವೀರಪ್ಪಗೌಡನನ್ನು ಸೋಲಿಸಿ ಬಂಧಿಸುವುದರೊಂದಿಗೆ ಈ ಮನೆತನ ಅಂತ್ಯವಾಯಿತು[2].

**ಭೌಗೋಳಿಕ ಹಿನ್ನೆಲೆ**

ಮಾಗಡಿ ರಾಮನಗರ ಜಿಲ್ಲೆಯ ತಾಲ್ಲುಕು ಕೇಂದ್ರವಾಗಿದೆ. ಬೆಂಗಳೂರಿನಿಂದ ಪಶ್ಚಿಮ ದಿಕ್ಕಿಗಿರುವ ಮಾಗಡಿಯು 51 ಕಿ.ಮೀ ಅಂತರದಲ್ಲಿ ನೆಲೆಗೊಂಡಿದ್ದು, ನಾಡಪ್ರಭುಗಳ ಮೂರನೇ ರಾಜಧಾನಿ ಯಾಗಿತ್ತು. ಮಾಗಡಿಯು ಸಾವನದುರ್ಗ ಬೆಟ್ಟಗಳ ಮಧ್ಯದಲ್ಲಿ ನೆಲೆಗೊಂಡಿದೆ ಇದರ ಸುತ್ತಲೂ ಸಾವನದುರ್ಗ, ಹುತ್ರಿದುರ್ಗಗಳಂತಹ ಎತ್ತರದ ಬೆಟ್ಟಗಳ ಶ್ರೇಣಿಗಳಿವೆ. ಅರ್ಕಾವತಿ ನದಿಯು ಈ ಬೆಟ್ಟಗಳ ಕಣಿವೆಯ ಮೂಲಕ ಹರಿಯುತ್ತದೆ. ಮಾಗಡಿಯ ಎಡ ಭಾಗದಲ್ಲಿ ತಿಪ್ಪಗೊಂಡನಹಳ್ಳಿ ಕೆರೆ ಹಾಗೂ ಇಲ್ಲಿಯ ಕಣಿವೆಗಳಲ್ಲಿ ಅರ್ಕಾವತಿ ನದಿಗೆ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟು ಹಾಗೂ ಮಾಗಡಿ ಪಶ್ಚಿಮ ಮತ್ತು ದಕ್ಷಿಣಕ್ಕೆ ಹುತ್ರಿದುರ್ಗ ಮುಂತಾದ ಬೆಟ್ಟಗಳಿದ್ದು ವೈವಿಧ್ಯಮಯವಾದ ಭೌಗೋಳಿಕದಿಂದ ಕೂಡಿದೆ.

**ಮಾಗಡಿ ಕೋಟೆ**

ಮಾಗಡಿ ಕೋಟೆ ಯಲಹಂಕ ನಾಡಪ್ರಭುಗಳು ನಿರ್ಮಿಸಿರುವಂತಹ ಅತ್ಯಂತ ಬಲಿಷ್ಠ ಕೋಟೆಗಳಲ್ಲಿ ಒಂದಾಗಿದೆ. ಈ ಕೋಟೆಯನ್ನು ಮೊದಲಿಗೆ ಮಣ್ಣಿನಿಂದ ಗೋಡೆಗಳನ್ನು ನಿರ್ಮಿಸಲಾಯಿತು. ನಂತರ ಗೋಡೆಗಳ ಹೊರ ಮತ್ತು ಒಳಭಾಗಗಳನ್ನು ಕಲ್ಲುಗಳಿಂದ ನಿರ್ಮಿಸಲಾಯಿತು. ಹಾಗಾಗಿ ಕೋಟೆಯ ಗೋಡೆಗಳ ಸುಮಾರು 5 ಮೀ. ನಷ್ಟು ಅಗಲವಾಗಿ ಗೋಚರಿಸುತ್ತವೆ. ಗೋಡೆಯು ಸುಮಾರು 6 ಮಿ. ಎತ್ತರವನ್ನು ಹೊಂದಿದೆ. ಕೋಟೆಯು ಚೌಕಾಕಾರದಲ್ಲಿದ್ದು ನಾಲ್ಕು ದಿಕ್ಕುಗಳಿಗೂ ನಾಲ್ಕು ಪ್ರವೇಶ ದ್ವಾರಗಳನ್ನು ನಿರ್ಮಾಣ ಮಾಡಲಾಗಿತ್ತು. ಕೋಟೆಗೋಡೆ ಒಳಭಾಗದಲ್ಲಿ ಮೆಟ್ಟಿಲುಗಳು ಹೊಂದಿರುವ ಅವಶೇಷಗಳು ಪತ್ತೆಯಾಗಿವೆ. ಇವು ಸಾಮಾನ್ಯವಾಗಿ ನಾಲ್ಕು ಮೂಲೆಗಳ ಕೊತ್ತಲು ಭಾಗದಲ್ಲಿರುವುದನ್ನ ವಿಶೇಷವಾಗಿ ನೋಡಬಹುದು. ಪಹರೆ ಗೋಡೆಯನ್ನು ಕೋಟೆಯ ಗೋಡೆಯ ಮೇಲ್ಭಾಗದಲ್ಲಿ ನಿರ್ಮಿಸಲಾಗಿತ್ತು, ಆದರೆ ಇಂದು ನಾಶವಾಗಿದೆ. ಕೋಟೆಯ ನಾಲ್ಕು ಮೂಲೆಗಳಲ್ಲಿ ಚೌಕಾಕಾರದ ನಾಲ್ಕು

[1] ಚನ್ನಬಸಪ್ಪ ಎಸ್ ಪಾಟೀಲ್. (1999). *ಕರ್ನಾಟಕ ಕೋಟೆಗಳು.* ಸಂಪುಟ 1, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.

[2] ಅರುಣಿ ಎಸ್.ಕೆ. (2019). *ಬೆಂಗಳೂರು ಪರಂಪರೆ.* ಇತಿಹಾಸ ದರ್ಪಣ ಪ್ರಕಾಶನ.

ಕೊತ್ತಲುಗಳಿದ್ದು ಇವುಗಳು ಕೋಟೆಗಳಿಗಿಂತಲೂ ಎತ್ತರವಾಗಿರುವುದನ್ನು ನೋಡಬಹುದು. ಇದು ಸುಮಾರು 8 ಮಿ. ಎತ್ತರ 5 ಮಿ. ಅಗಲವಾಗಿದೆ. ಇವುಗಳ ಗೋಡೆಗಳನ್ನು ದೊಡ್ಡ ಗಾತ್ರದ ಕಲ್ಲುಗಳಿಂದ ನಿರ್ಮಿಸಿ ಸದೃಢಗೊಳಿಸಲಾಗಿತ್ತು. ಕೋಟೆಯನ್ನು ಪಹರೆ ಮಾಡುವ ಮೂಲಕ ಮೇಲ್ಭಾಗದಿಂದಲೇ ಶತ್ರುಗಳನ್ನು ವೀಕ್ಷಿಸಿ ಕೋಟೆಯನ್ನು ರಕ್ಷಣೆ ಮಾಡುವ ಉದ್ದೇಶದಿಂದ ಈ ವ್ಯವಸ್ಥೆಯನ್ನು ಮಾಡಲಾಗಿತ್ತು. ಕೋಟೆ ಮೇಲ್ಭಾಗದಲ್ಲಿ ಫಿರಂಗಿಯನ್ನು ಇಡಲು ವ್ಯವಸ್ಥೆ ಮಾಡಿದಂತಹ ಅವಶೇಷಗಳು ಕಂಡುಬರುತ್ತವೆ.[3]

ಕೋಟೆಗೆ ಬಳಸಿರುವ ಕಲ್ಲುಗಳು 37 ಸೇ.ಮಿ ಅಗಲ, 92 ಸೆ,ಮೀ ಎತ್ತರ, 48ಸೇ.ಮೀ ದಪ್ಪವಾಗಿವೆ. ಕೋಟೆಯ ಮುಖ ಬಾಗದ ಕಲ್ಲನ್ನು ನಾಜೂಕುಗೊಳಿಸಲಾಗಿದೆ. ಗೋಡೆ ಕೆಳಬಾಗದ ಕಲ್ಲುಗಳು ಗಾತ್ರದಲ್ಲಿ ದೊಡ್ಡದಾಗಿದ್ದು, ಮೇಲ್ಭಾಗಕ್ಕೆ ಹೋದಂತೆಲ್ಲ ಕಲ್ಲುಗಳ ಗಾತ್ರ ಕಿರದಾಗುತ್ತಾ ಹೋಗುತ್ತದೆ. ಕೋಟೆಯ ಸುತ್ತಲು ಕಂದಕವನ್ನು ತೋಡಲಾಗಿದ್ದು, ಶತ್ರುಗಳ ದಾಳಿಯಿಂದ ರಕ್ಷಿಸುವುದು ಇದರ ಉದ್ದೇಶವಾಗಿದೆ. ಇದು ಕೋಟೆಯ ಗೋಡೆಯಿಂದ 6 ಮೀ. ಅಂತರದಲ್ಲಿ 9 ಮೀ. ಆಳವಾದ ದೊಡ್ಡ ಕಂದಕವು ಕೋಟೆಯನ್ನು ಸುತ್ತುವರೆದಿದೆ.

ಈ ಕೋಟೆಯನ್ನು ಪ್ರವೇಶಿಸಲು ನಾಲ್ಕು ದಿಕ್ಕುಗಳಿಗೂ ನಾಲ್ಕು ಪ್ರವೇಶ ದ್ವಾರಗಳಲ್ಲಿ ನಿರ್ಮಿಸಲಾಗಿತ್ತು. ಆದರೆ ಪ್ರಸ್ತುತ ಪೂರ್ವ ದಿಕ್ಕಿನಲ್ಲಿ ಮಾತ್ರ ಪ್ರವೇಶ ದ್ವಾರದ ಅವಶೇಷ ಕಂಡುಬರುತ್ತದೆ. ದ್ವಾರದ ಕಂಬ ಮತ್ತು ಬೋಧಿಗೆಗಳ ಶೈಲಿಯೂ ಸುಮಾರು 16 ಮತ್ತು 17ನೇ ಶತಮಾನಕ್ಕೆ ಸೇರಿರುತ್ತವೆ. ಈ ಕಂಬಗಳು ಸುಂದರವಾಗಿ ಕಾಣುವಂತೆ ಮಾಡಲು ಬಗೆ ಬಗೆಯ ಉಬ್ಬು ಶಿಲ್ಪಗಳಿಂದ ಅಲಂಕರಿಸಲಾಗಿದೆ ಅಷ್ಟೇ ಅಲ್ಲದೆ ಇವುಗಳ ಒಂದು ಕಂಬದ ಮೇಲೆ ಸುಮಾರು 1 ಮಿ. ಎತ್ತರದ ಆಂಜನೇಯನ ಶಿಲ್ಪವಿದೆ. ಈ ದ್ವಾರದ ಹೊರ ಭಾಗದ ಬದಿಗಳಲ್ಲಿ ವರ್ತುಲಕಾರದ ಕೊತ್ತಲುಗಳನ್ನು ನಿರ್ಮಾಣ ಮಾಡಲಾಗಿದೆ[4]. ಆಕ್ರಮಣಕಾರರನ್ನು ತಡೆಯುವ ಉದ್ದೇಶದಿಂದ ನಿರ್ಮಿಸಲಾಗಿರುತ್ತದೆ.

ಕೋಟೆಯ ಇನ್ನುಳಿದ ಮೂರು ದಿಕ್ಕುಗಳಲ್ಲಿನ ಪ್ರವೇಶ ದ್ವಾರಗಳು ಸಂಪೂರ್ಣವಾಗಿ ನಾಶವಾಗಿದ್ದಾವೆ, ಕೋಟೆಗೋಡೆಯನ್ನು ಬಳಸಿ ಉತ್ತರ ಮತ್ತು ದಕ್ಷಿಣ ಗೋಡೆಗಳ ಮಧ್ಯದಲ್ಲಿ ಪ್ರಸ್ತುತ ಡಾಂಬರ್ ರಸ್ತೆ ಹಾದು ಹೋಗುತ್ತದೆ. ಪಶ್ಚಿಮ ಗೋಡೆಯ ಮಧ್ಯಭಾಗವು ಸಹ ಬಿದ್ದು ಹೋಗಿದ್ದು, ಅದರ ಮೂಲಕ ಜನ ಓಡಾಡಲು ಪ್ರಾರಂಭಿಸಿದ್ದಾರೆ. ಮುಂದುವರೆದಂತೆ ದಕ್ಷಿಣ ಗೋಡೆಯ ಮೇಲೆ ಗುಡಿಸಲಗಳು ರಾರಾಜಿಸುತ್ತಿವೆ. ಈಶಾನ್ಯ ಭಾಗದಲ್ಲಿ ಮಾಗಡಿ ತಾಲೂಕಿನ ಶಿಕ್ಷಕರ ಭವನ ನಿರ್ಮಾಣಗೊಂಡಿದೆ. ದೀಪದ ಕೆಳಗೆ ಕತ್ತಲು ಎಂಬಂತೆ ಮಾಗಡಿ ಕೋಟೆ ಶುಕ್ರವಾರದ ಕುರಿ, ಮೇಕೆ ಸಂತೆಯಾಗಿದೆ. ರಾಷ್ಟ್ರೀಯ ಹಬ್ಬಗಳ ಆಚರಣೆ, ರಾಜಕಾರಣಿಗಳ ಸಭೆ ಸಮಾರಂಭಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಮಾಗಡಿ ಕೋಟೆಯ ಪುನರ ನಿರ್ಮಾಣದ ಕಾರ್ಯ ಕೈಗೆತ್ತಿಕೊಂಡಿದ್ದಾಗ ಫಿರಂಗಿಗೆ ಬಳಸಲಾಗುತ್ತಿತ್ತು ಎನ್ನಲಾಗುವ ಸುಮಾರು 3.5 ಕೆಜಿ ತೂಕದ ಮತ್ತು 16ಸೇ.ಮಿ ಎತ್ತರದ ಕಲ್ಲಿನ ಗುಂಡುಗಳು ದೊರೆತಿವೆ. ಬಹುಶ ಇವು ಮುಮ್ಮಡಿ ಕೆಂಪೇಗೌಡನ ಕಾಲಕ್ಕೆ ಸೇರಿರುವಂತಹವು ಎಂದು ಹೇಳಲಾಗಿದೆ[5].

---

[3] ಜಮುನ ಎಂ. (ಸಂ.). (2007). *ಯಲಹಂಕ ನಾಡಪ್ರಭುಗಳು, ವಾಸ್ತುಶಿಲ್ಪ ಮತ್ತು ಶಿಲ್ಪಕಲೆ ಸಂಪುಟ.* ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

[4] ಕ್ಷೇತ್ರಕಾರ್ಯ : ಮಾಗಡಿ ದಿನಾಂಕ 09/09/2023

[5] ಸುವರ್ಣ ನ್ಯೂಸ್ ಚಾನೆಲ್ ವರದಿ (2018, ಜನವರಿ 09).

ಮಾಗಡಿ ಕೋಟೆಯ ಸಂರಕ್ಷಣೆಯ ಉಸ್ತುವಾರಿ ಕೊರತೆಯಿಂದ ಗೋಡೆಗಳ ಮೇಲೆ ಕುರುಚಲ ಗಿಡಗಳು ಸೇರಿದಂತೆ ಗಿಡಗಂಟಿಗಳು ಬೆಳೆಯಲಾರಂಬಿಸಿವೆ. ಕೆಂಪೇಗೌಡರ ಕಾಲದ ಪಳೆಯುಳಿಕೆಗಳನ್ನು ಜೀರ್ಣೋದ್ಧಾರ ಗೊಳಿಸುವ ಮೂಲಕ ಸಂರಕ್ಷಣೆ ಮಾಡಬೇಕೆಂಬ ಉದ್ದೇಶದಿಂದ ಕೆಂಪೇಗೌಡ ಹೆಸರಿನಲ್ಲಿ ಅಭಿವೃದ್ಧಿ ಪ್ರಾಧಿಕಾರವು ಸಹ ರಚನೆಯಾಗಿ ಹಲವು ವರ್ಷಗಳೇ ಕಳೆದಿವೆ. ಅಲ್ಲದೆ ಜೀರ್ಣೋದ್ಧಾರದ ಜೊತೆಗೆ ಅಭಿವೃದ್ಧಿಗಾಗಿ ಕೋಟ್ಯಾಂತರ ರೂಗಳು ಮಂಜುರಾಗಿದೆ. ಆದರೂ ಕೋಟೆಯ ಅಭಿವೃದ್ಧಿ ಮಾತ್ರ ಮರೀಚಿಕೆಯಾಗಿದೆ, ಎಂಬ ಆರೋಪ ಜನರಿಂದ ಕೇಳಿ ಬರುತ್ತಿದೆ. ಒಟ್ಟಾರೆಯಾಗಿ ಹೇಳುವುದಾದರೆ ಅಭಿವೃದ್ಧಿ ಪ್ರಾಧಿಕಾರವಿದ್ದರೂ ಮತ್ತು ಅನುದಾನವಿದ್ದರೂ ಅಭಿವೃದ್ಧಿ ಇಲ್ಲದಿರುವುದು ವಿಪರ್ಯಾಸವೇ ಸರಿ.

ಮಾಗಡಿಯ ಭಾಗದಲ್ಲಿ ಹಲವು ಸ್ಮಾರಕಗಳನ್ನು ನೋಡಬಹುದು. ಅವುಗಳಲ್ಲಿ ಕೆಲವು ದೇವಾಲಯಗಳು ಮಂಟಪಗಳು, ಹಜಾರ, ಗೋಪುರ ದ್ವಾರಗಳಂತಹ ಬಗೆ ಬಗೆಯ ಸ್ಮಾರಕಗಳನ್ನು ನೋಡಬಹುದು. ರಾಮೇಶ್ವರ ದೇವಾಲಯ, ಪಂಚಲಿಂಗೇಶ್ವರ ದೇವಾಲಯ, ಸೋಮೇಶ್ವರ ದೇವಾಲಯ, ಪಾರ್ವತಿ ದೇವಾಲಯ, ಸೂರ್ಯನಾರಾಯಣ ದೇವಾಲಯ, ನರಸಿಂಹ ಗುಡಿ ಮುಂತಾದವುಗಳು ಕಂಡುಬರುತ್ತವೆ.

**ಉಪಸಂಹಾರ**

ಮಾಗಡಿಯು ಯಲಹಂಕ ನಾಡಪ್ರಭುಗಳ ಐತಿಹಾಸಿಕ ತಾಣವಾಗಿ ಪ್ರಸಿದ್ಧಿ ಪಡೆದುಕೊಂಡಿದೆ. ಮತ್ತು ಬೆಟ್ಟ ಗುಡ್ಡಗಳಿಂದ ಸುತ್ತವರಿದಿರುವ ನೈಸರ್ಗಿಕ ಸ್ಥಳವು ಹೌದು. ಈ ಒಂದು ಸ್ಥಳದಲ್ಲಿ ಕೆಂಪೇಗೌಡರ ಕಾಲದ ವಿಶಾಲವಾದ ಕೋಟೆ ಇದೆ. ಇದು ಅವರ ಮಿಲಿಟರಿ ವಾಸ್ತುಶಿಲ್ಪದ ದ್ಯೋತ್ಯಕವಾಗಿರುವ ಕಟ್ಟಡವಾಗಿದೆ. ಇಂತಹ ಕೋಟೆಯು ಪ್ರಸ್ತುತದ ದಿನಮಾನಗಳಲ್ಲಿ ತನ್ನ ಮೂಲ ಸ್ವರೂಪವನ್ನ ಕಳೆದಕೊಂಡಿದೆ. ಈ ಕೋಟೆಯನ್ನು ಸಂರಕ್ಷಣೆ ಮಾಡುವವಲ್ಲಿ ಸರ್ಕಾರ, ಸಂಬಂಧಪಟ್ಟ ಇಲಾಖೆಗಳು, ನಾಗರೀಕರು ವಿಫಲರಾಗಿದ್ದಾರೆ. ಆದರೂ ಸಹ ಸಂರಕ್ಷಣೆಯ ಪ್ರಯತ್ನಗಳು ನಡೆಯಿತ್ತಿರುವುದು ಒಂದು ಸಮಾದಾನಕರವಾದ ವಿಷಯ. ಒಟ್ಟಾರೆಯಾಗಿ ಪುರಾತತ್ವ ಕಟ್ಟಗಳನ್ನ ಉಳಿಸಿ ಮುಂದಿನ ಜನಾಂಗಕ್ಕೆ ವರ್ಗಾಹಿಸುವುದು ನಮ್ಮೆಲ್ಲರ ಕರ್ತವ್ಯ ಮತ್ತು ಬಹುದೊಡ್ಡ ಹೊಣೆ ಏಕೆಂದರೆ ಇವು ಮಾನವ ಜನಾಂಗದ, ಜೀವನದ ಪರಂಪರೆಯ ಪ್ರತಿಬಿಂಬಗಳಿದ್ದಂತೆ.

**ಪರಾಮರ್ಶನ/ಆಕರ ಗ್ರಂಥಗಳು**


- ಅರುಣಿ ಎಸ್.ಕೆ (2019). *ಬೆಂಗಳೂರು ಪರಂಪರೆ.* ಇತಿಹಾಸ ದರ್ಪಣ ಪ್ರಕಾಶನ.
- ಚನ್ನಬಸಪ್ಪ ಎಸ್ ಪಾಟೀಲ್. (1999). *ಕರ್ನಾಟಕ ಕೋಟೆಗಳು–ಸಂಪುಟ 1.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ಜಮುನ ಎಂ. (ಸಂ.). (2007). *ಯಲಹಂಕ ನಾಡಪ್ರಭುಗಳು, ವಾಸ್ತುಶಿಲ್ಪ ಮತ್ತು ಶಿಲ್ಪಕಲೆ ಸಂಪುಟ.* ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.
- Shaik Masthan N. (Ed.) (2022). *History and Heritage of Bangalore.* College Book House.